ದೂರವಾಣಿ ಸಂಖ್ಯೆ: 080-22212343
ಫ್ಯಾಕ್ಸ್ ಸಂಖ್ಯೆ: 080-22278803

ಅಂತರ್ಜಾಲ: https://kptcl.karnataka.gov.in
ಮಿಂಚಂಚೆ: director.ahr.kptcl@gmail.com

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

Corporate Identity Number (CIN): U40109KA1999SGC025521

**(ಕಂಪನಿಯ ಅಧಿಕೃತ ಕಚೇರಿ: ನಿಗಮ ಕಾರ್ಯಾಲಯ, ಕಾವೇರಿ ಭವನ, ಕೆ.ಜಿ.ರಸ್ತೆ, ಬೆಂಗಳೂರು-560 009)**

**ಸಂಖ್ಯೆ: ಕವಿಪ್ರನಿನಿ/ಬಿ16/2835/99-2000**

**ದಿನಾಂಕ:** 2 SEP 2021

## ಅಧಿಸೂಚನೆ

**ವಿಷಯ:** ದಿನಾಂಕ: 03.09.2021 ರಂದು ನಡೆಯುವ ಮಹಾನಗರ ಪಾಲಿಕೆಗಳು, ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಟ್ಟಣ ಪಂಚಾಯಿತಿಗಳಿಗೆ ನಡೆಯುವ ಸಾರ್ವತ್ರಿಕ ಚುನಾವಣೆ/ಉಪ ಚುನಾವಣೆಯಲ್ಲಿ ಮತದಾನ ಮಾಡಲು ಸಾರ್ವತ್ರಿಕ ರಜೆ ಘೋಷಿಸುವ ಬಗ್ಗೆ.

**ಉಲ್ಲೇಖ:** ಕರ್ನಾಟಕ ಸರ್ಕಾರದ ಅಧಿಸೂಚನೆ ಸಂಖ್ಯೆ: ಸಿಆಸುಇ 34 ಹೆಚ್‌ಹೆಚ್‌ಎಲ್ 2021, ದಿನಾಂಕ: 31.08.2021.

*****

ಈ ಅಧಿಸೂಚನೆಯ **ಅನುಬಂಧದಲ್ಲಿ** ತಿಳಿಸಿರುವ ಮಹಾನಗರ ಪಾಲಿಕೆಗಳು, ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಟ್ಟಣ ಪಂಚಾಯಿತಿಗಳಿಗೆ ಸಾರ್ವತ್ರಿಕ ಚುನಾವಣೆ/ ಉಪ ಚುನಾವಣೆಗೆ, ದಿನಾಂಕ: 03.09.2021 ರ ಶುಕ್ರವಾರದಂದು ಮತದಾನ ನಡೆಯಲಿದೆ.

ಸದರಿ ಮತ ಕ್ಷೇತ್ರಗಳ ವ್ಯಾಪ್ತಿಯಲ್ಲಿನ ನಿಗಮದ ಅರ್ಹ ಮತದಾರ ನೌಕರರಿಗೆ ಮತದಾನ ಮಾಡಲು ಅನುಕೂಲವಾಗುವಂತೆ ಹಾಗೂ ಚುನಾವಣೆ ನಡೆಯುವ ವಾರ್ಡ್‌ನ ವ್ಯಾಪ್ತಿಯ ಹೊರಗಡೆ ಕೆಲಸ ನಿರ್ವಹಿಸುತ್ತಿದ್ದು, ಆದರೆ ಚುನಾವಣೆ ನಡೆಯುತ್ತಿರುವ ವಾರ್ಡ್‌ನ ವ್ಯಾಪ್ತಿಯಲ್ಲಿ ನೋಂದಾಯಿತ ಮತದಾರ ನೌಕರರಿಗೆ ಮತದಾನ ಮಾಡಲು ಅನುಕೂಲವಾಗುವಂತೆ ದಿನಾಂಕ: 03.09.2021 ರ ಶುಕ್ರವಾರದಂದು ವೇತನ ಸಹಿತ ರಜೆಯನ್ನು ಘೋಷಿಸಿದೆ. ಈ ರಜೆಯು ತುರ್ತು ಸೇವೆಯ ಮೇಲೆ ಇರುವ ನಿಗಮದ ನೌಕರರಿಗೆ ಅನ್ವಯಿಸುವುದಿಲ್ಲ.

ಈ ಚುನಾವಣಾ ಕಾರ್ಯಗಳಿಗೆ ನಿಯೋಜಿಸಲ್ಪಟ್ಟ ನಿಗಮದ ಎಲ್ಲಾ ನೌಕರರು ಚುನಾವಣಾ ಕಾರ್ಯಕ್ಕೆ ಹಾಜರಾಗತಕ್ಕದ್ದು.

ಮೇಲ್ಕಂಡ ದಿನಾಂಕದಂದು ನಿಗಮದ ಕಚೇರಿಗಳಲ್ಲಿ ಪಾಳಿಯ ಮೇಲೆ ಅಥವಾ ತುರ್ತು ಕೆಲಸ ನಿರ್ವಹಿಸುವ ನೌಕರರು ಚುನಾವಣೆಗೆ ಸಂಬಂಧಿಸಿದ ಸ್ಥಾವರಗಳಿಗೆ ನಿಲುಗಡೆರಹಿತ ವಿದ್ಯುತ್ ಸಂಪರ್ಕ ಒದಗಿಸಲು ಮುಂಜಾಗ್ರತೆ ಕ್ರಮ ತೆಗೆದುಕೊಳ್ಳುವುದು ಮತ್ತು ಅಂತಹ ನೌಕರರಿಗೆ ಮತ ಚಲಾಯಿಸಲು ಅನುಕೂಲವಾಗುವಂತೆ ಬದಲಿ ವ್ಯವಸ್ಥೆ ಮಾಡಿಕೊಡುವುದು.

**ನಿರ್ದೇಶಕರು**
**(ಆಡಳಿತ ಮತ್ತು ಮಾನವ ಸಂಪನ್ಮೂಲ)**

**ಗೆ:**

1. ವ್ಯವಸ್ಥಾಪಕ ನಿರ್ದೇಶಕರು, ಬೆಸ್ಕಾಂ/ಜೆಸ್ಕಾಂ/ಹೆಸ್ಕಾಂ/ಮೆಸ್ಕಾಂ/ಸೆಸ್ಕ್/ಪಿ.ಸಿ.ಕೆ.ಎಲ್.
2. ಎಲ್ಲಾ ನಿರ್ದೇಶಕರು(ತಾಂತ್ರಿಕ), ಎಸ್ಕಾಂಗಳು.
3. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಎಸ್ಕಾಂಗಳು.

4. ಎಲ್ಲಾ ಮುಖ್ಯ ಇಂಜಿನಿಯರ್(ವಿ), ಕವಿಪ್ರನಿನಿ/ಎಸ್ಕಾಂಗಳು.
5. ಹಿರಿಯ ಆಪ್ತ ಕಾರ್ಯದರ್ಶಿಗಳು, ವ್ಯವಸ್ಥಾಪಕ ನಿರ್ದೇಶಕರು/ನಿರ್ದೇಶಕರು (ಹಣಕಾಸು)/ನಿರ್ದೇಶಕರು(ಪ್ರಸರಣ)/ ನಿರ್ದೇಶಕರು (ಆಡಳಿತ ಮತ್ತು ಮಾನವ ಸಂಪನ್ಮೂಲ), ಕವಿಪ್ರನಿನಿ.

https://kptcl.karnataka.gov.in/eprasarana for information of:

6. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ)/ನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
7. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ)/ಉಪ ಲೆಕ್ಕನಿಯಂತ್ರಣಾಧಿಕಾರಿಗಳು, ಕವಿಪ್ರನಿನಿ/ಎಸ್ಕಾಂಗಳು.
8. ಎಲ್ಲಾ ಅಧಿಕಾರಿಗಳು, ನಿಗಮ ಕಾರ್ಯಾಲಯ, ಕವಿಪ್ರನಿನಿ., ಕಾವೇರಿಭವನ, ಬೆಂಗಳೂರು.

ಪ್ರತಿಯನ್ನು ಮಾಹಿತಿಗಾಗಿ ರವಾನಿಸಿದೆ:-

1. ಶ್ರೀ.ಟಿ.ಆರ್.ರಾಮಕೃಷ್ಣಯ್ಯ, ಅಧ್ಯಕ್ಷರು, ಕವಿಪ್ರನಿ ನೌಕರರ ಸಂಘ (ನೋಂದಣಿ ಸಂಖ್ಯೆ: 659), ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
2. ಶ್ರೀ.ಟಿ.ಎಂ.ಶಿವಪ್ರಕಾಶ್, ಅಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು ಮತ್ತು ನಿರ್ದೇಶಕರು, ಕವಿಪ್ರನಿನಿ ಹಾಗೂ ಎಲ್ಲಾ ಎಸ್ಕಾಂಗಳು.
3. ಪ್ರಧಾನ ಕಾರ್ಯದರ್ಶಿ, ಕವಿಪ್ರನಿ ನೌಕರರ ಸಂಘ, ಬೆಂಗಳೂರು.
4. ಪ್ರಧಾನ ಕಾರ್ಯದರ್ಶಿ, ಕವಿಮಂ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
5. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಲೆಕ್ಕಾಧಿಕಾರಿಗಳ ಸಂಘ, ಬೆಂಗಳೂರು.
6. ಪ್ರಧಾನ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ(ರಿ), ಬೆಂಗಳೂರು.
7. ಪ್ರಧಾನ ಕಾರ್ಯದರ್ಶಿ, ಕವಿಪ್ರನಿನಿ, ಡಿಪ್ಲೋಮಾ ಇಂಜಿನಿಯರ್‌ಗಳ ಸಂಘ, ಬೆಂಗಳೂರು.
8. ಪ್ರಧಾನ ಕಾರ್ಯದರ್ಶಿ, ಕವಿಮಂ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಧಿಕಾರಿಗಳ ಸಂಘ, ಬೆಂಗಳೂರು.

# ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ

ನಿಗಮದ ಅಧಿಸೂಚನೆ ಸಂಖ್ಯೆ: ಕವಿಪ್ರನಿನಿ/ಬಿ16/2835/99–2000,

ದಿನಾಂಕ: 2 SEP 2021 ರ ಅನುಬಂಧ

### ಅ. ಸಾರ್ವತ್ರಿಕ ಚುನಾವಣೆ ನಡೆಯುವ ಮಹಾನಗರ ಪಾಲಿಕೆಗಳ ವಿವರ

| ಕ್ರ. ಸಂ | ಜಿಲ್ಲೆ | ನಗರ ಸ್ಥಳೀಯ ಸಂಸ್ಥೆಯ ಹೆಸರು | ಒಟ್ಟು ವಾರ್ಡ್‌ಗಳು |
|---|---|---|---|
| 1 | ಬೆಳಗಾವಿ | ಮಹಾನಗರ ಪಾಲಿಕೆ | 58 |
| 2 | ಹುಬ್ಬಳ್ಳಿ-ಧಾರವಾಡ | ಮಹಾನಗರ ಪಾಲಿಕೆ | 82 |
| 3 | ಕಲಬುರಗಿ | ಮಹಾನಗರ ಪಾಲಿಕೆ | 55 |

### ಆ. ಸಾರ್ವತ್ರಿಕ ಚುನಾವಣೆ ನಡೆಯುವ ನಗರ ಸ್ಥಳೀಯ ಸಂಸ್ಥೆಗಳ ವಿವರ

| ಕ್ರ. ಸಂ | ಜಿಲ್ಲೆ | ನಗರ ಸ್ಥಳೀಯ ಸಂಸ್ಥೆಯ ಹೆಸರು | | ಚುನಾವಣೆ ನಡೆಯುವ ವಾರ್ಡ್‌ಗಳ ಸಂಖ್ಯೆ |
|---|---|---|---|---|
| 1 | ಬೆಂಗಳೂರು ಗ್ರಾಮಾಂತರ | ದೊಡ್ಡಬಳ್ಳಾಪುರ | ನಗರಸಭೆ | 1 ರಿಂದ 31 |
| 2 | ಚಿಕ್ಕಮಗಳೂರು | ತರೀಕೆರೆ | ಪುರಸಭೆ | 1 ರಿಂದ 23 |
| 3 | ಬೀದರ್ | ಬೀದರ್ | ನಗರಸಭೆ | 26 ಮತ್ತು 32ನೇ ವಾರ್ಡ್ |
| 4 | ಶಿವಮೊಗ್ಗ | ಭದ್ರಾವತಿ | ನಗರಸಭೆ | 29ನೇ ವಾರ್ಡ್ |

### ಇ. ಉಪಚುನಾವಣೆ ನಡೆಯುವ ಮಹಾನಗರ ಪಾಲಿಕೆಯ ವಿವರ

| ಕ್ರ. ಸಂ | ಜಿಲ್ಲೆ | ನಗರ ಸ್ಥಳೀಯ ಸಂಸ್ಥೆಯ ಹೆಸರು | ಚುನಾವಣೆ ನಡೆಯುವ ವಾರ್ಡ್‌ಗಳ ಸಂಖ್ಯೆ |
|---|---|---|---|
| 1 | ಮೈಸೂರು | ಮಹಾನಗರ ಪಾಲಿಕೆ | 36ನೇ ವಾರ್ಡ್ |

### ಈ. ಉಪಚುನಾವಣೆ ನಡೆಯುವ ನಗರ ಸ್ಥಳೀಯ ಸಂಸ್ಥೆಗಳ ವಿವರ

| ಕ್ರ. ಸಂ | ಜಿಲ್ಲೆ | ಕ್ರ. ಸಂ | ನಗರ ಸ್ಥಳೀಯ ಸಂಸ್ಥೆಯ ಹೆಸರು | | ವಾರ್ಡಿನ ಸಂಖ್ಯೆ |
|---|---|---|---|---|---|
| 1 | ಬಾಗಲಕೋಟೆ | 1 | ಮುಧೋಳ | ನಗರಸಭೆ | 18 |
| | | 2 | ಬೀಳಗಿ | ಪಟ್ಟಣ ಪಂಚಾಯತ್ | 14 |
| | | 3 | ಮಹಾಲಿಂಗಪುರ | ಪುರಸಭೆ | 3 |
| | | 4 | ತೇರದಾಳ | ಪುರಸಭೆ | 3 |
| 2 | ಕೊಡಗು | 5 | ವಿರಾಜಪೇಟೆ | ಪಟ್ಟಣ ಪಂಚಾಯತ್ | 13 |
| | | 6 | ಸೋಮವಾರಪೇಟೆ | ಪಟ್ಟಣ ಪಂಚಾಯತ್ | 1 |
| | | 7 | ಸೋಮವಾರಪೇಟೆ | ಪಟ್ಟಣ ಪಂಚಾಯತ್ | 3 |
| 3 | ಉತ್ತರ ಕನ್ನಡ | 8 | ದಾಂಡೇಲಿ | ನಗರಸಭೆ | 11 |
| 4 | ಕಲಬುರಗಿ | 9 | ವಾಡಿ | ಪುರಸಭೆ | 4 |
| | | 10 | ವಾಡಿ | ಪುರಸಭೆ | 23 |
| 5 | ಬೀದರ್ | 11 | ಬಸವಕಲ್ಯಾಣ | ನಗರಸಭೆ | 11 |
| | | 12 | ಬಸವಕಲ್ಯಾಣ | ನಗರಸಭೆ | 23 |
| 6 | ಕೋಲಾರ | 13 | ಕೆ.ಜಿ.ಎಫ್ | ನಗರಸಭೆ | 12 |
| 7 | ದಾವಣಗೆರೆ | 14 | ಹರಿಹರ | ನಗರಸಭೆ | 14 |
| 8 | ಬೆಳಗಾವಿ | 15 | ರಾಯಬಾಗ್ | ಪಟ್ಟಣ ಪಂಚಾಯತ್ | 9 |
| 9 | ಕೊಪ್ಪಳ | 16 | ಸವದತ್ತಿ | ಪುರಸಭೆ | 23 |
| | | 17 | ಕುಷ್ಟಗಿ | ಪುರಸಭೆ | 16 |
| 10 | ಗದಗ | 18 | ಮುಳಗುಂದ | ಪಟ್ಟಣ ಪಂಚಾಯತ್ | 18 |
| 11 | ರಾಮನಗರ | 19 | ರಾಮನಗರ | ನಗರಸಭೆ | 4 |
| 12 | ವಿಜಯಪುರ | 20 | ಬಸವನಬಾಗೇವಾಡಿ | ಪುರಸಭೆ | 21 |

ಪ್ರಧಾನ ವ್ಯವಸ್ಥಾಪಕರು

(ಸಿಬ್ಬಂದಿ)